# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189–ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 13.04.2022 ರಂದು ಬುಧವಾರ ಸಮಯ ಮಧ್ಯಾಹ್ನ 2.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು,**
**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ | ನೋಡಲ್ ಅಧಿಕಾರಿಗಳು/ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ |
| 2 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂ. 189, ಹೊಂಗಸಂದ್ರ |
| 3 | ಶ್ರೀ ಕೋದಂಡರಾಮ ರೆಡ್ಡಿ | ಸದಸ್ಯರು |
| 4 | ಶ್ರೀ ನಾಗಭೂಷಣ್ ಆರ್ | ಸದಸ್ಯರು |
| 5 | ಶ್ರೀ ಗಿರೀಶ್. ಎಸ್ | ಸದಸ್ಯರು |
| 6 | ಶ್ರೀ ಮುನಿರಾಜು | ಸದಸ್ಯರು |
| 7 | ಶ್ರೀ ನವೀನ್ | ಪಿ.ಎಸ್.ಐ, ಬೊಮ್ಮನಹಳ್ಳಿ ಪೋಲಿಸ್ ಠಾಣೆ |
| 8 | ಶ್ರೀ ಬಿ.ಎಂ. ಮಹಾದೇವಪ್ಪ | ಎ.ಎಸ್.ಐ, ಬೇಗೂರು ಪೋಲಿಸ ಠಾಣೆ |
| 9 | ಶ್ರೀ ಹೆಚ್ ವೆಂಕಟೇಶ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ:189 ಹೊಂಗಸಂದ್ರ |
| 10 | ಶ್ರೀ ವಿನೋದ್ ಕುಮಾರ್ ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ:189 ಹೊಂಗಸಂದ್ರ |
| 11 | ಶ್ರೀ ಶಿವಾನಂದ ಎಂ.ಜಿ. | ಕಿರಿಯ ಆರೋಗ್ಯ ಪರಿವೀಕ್ಷಕರು (ಪ್ರಾಥಮಿಕ ಆರೋಗ್ಯ ಕೇಂದ್ರ) |
| 12 | ಶ್ರೀ ಸಂತೋಷ ಪ್ರಸಾದ್.ಎಮ್ | ಸಹಾಯಕ ಅಭಿಯಂತರರು,ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 13 | ಶ್ರೀ ರಮೇಶ್. ಡಿ | ಸ.ಅ. ವಿದ್ಯುತ್ (ಬೀದಿದೀಪ) |
| 14 | ಮಹೇಶ್ ಕುಮಾರ್ | ಕಿ.ಅ ಬೆಸ್ಕಾಂ |
| 15 | ವಿನೋದ್.ಟಿ | ಮಾರ್ಷಲ್ |
| 16 | ಶ್ರೀನಿವಾಸ್ ಮೂರ್ತಿ | ಸಾರ್ವಜನಿಕರು |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಅಧ್ಯಕ್ಷರು/ನೋಡಲ್ ಅಧಿಕಾರಿರವರು ಪ್ರಾರಂಭಿಸಿದರು.

(2...)

Scanned with

- **ಬಿ.ಡಬ್ಲ್ಯೂ.ಎಸ್.ಎಸ್.ಬಿ:-**

1. ದಿನಾಂಕ: 30.04.2022 ರಂದು ಹಮ್ಮಿಕೊಂಡಿರುವ ಊರಿನ ಹಬ್ಬವನ್ನು ದಿನಾಂಕ: 06.05.2022 ರಿಂದ 07.05.2022 ರಂದು ಮುಂದೂಡಲಾಗಿದೆ ಆದ್ದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಈಗಾಗಲೇ 8ನೇ ಮುಖ್ಯ ರಸ್ತೆ & ಓಣಿ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಹೊಸದಾಗಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವಂತೆ ಶ್ರೀ ನಾಗಭೂಷಣ, ಗಿರೀಶ್ ಸದಸ್ಯರು ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್. ಸಹಾಯಕ ಅಭಿಯಂತರರು, ಕಾಮಗಾರಿ ಚಾಲ್ತಿಯಲ್ಲಿದ್ದು, ಆದಷ್ಟು ಬೇಗ ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿದರು.
2. ದಿನಾಂಕ: 30.042022 ರಂದು ಬೆಳಗ್ಗೆ ಓ.ಎಫ್.ಸಿ ಕೇಬಲ್ ಅಳವಡಿಸುವ ಸಂಬಂಧ ರಸ್ತೆ ಕತ್ತರಿಸುವ ಸಮಯದಲ್ಲಿ ಕುಡಿಯುವ ನೀರಿನ ಪೈಪ್ ಲೈನ್ ಹಾಳಾಗಿದ್ದು, ಇದರಿಂದ ಕುಡಿಯುವ ನೀರು ಸೋರಿಕೆಯಾಗುತ್ತಿದ್ದು, ಕೂಡಲೇ ದುರಸ್ಥಿ ಪಡಿಸುವಂತೆ ಶ್ರೀ ನಾಗಭೂಷಣ, ಗಿರೀಶ್ ಸದಸ್ಯರು ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್. ಸಹಾಯಕ ಅಭಿಯಂತರರು, ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ಅನುಮತಿ ಪಡೆದಿರುವ ಗುತ್ತಿಗೆದಾರರಿಗೆ ಮಾನ್ಯ ನೋಡಲ್ ಅಧಿಕಾರಿಗಳು ದೂರವಾಣಿ ಕರೆ ಮಾಡಿ ತಾವುಗಳು ವಾರ್ಡ್ ವ್ಯಾಪ್ತಿಯಲ್ಲಿ ಕೇಬಲ್ ಅಳವಡಿಸುವ ಮುಂಚೆ ವಾರ್ಡ್ ಸ.ಅ. ರವರ ಗಮನಕ್ಕೆ ತಂದು ರಸ್ತೆ ಅಗೆಯ ತಕ್ಕದ್ದು ಹಾಗೂ ಮುಂದೆ ಕುಡಿಯುವ ನೀರಿನ ಪೈಪ್, ಒಳಚರಂಡಿ ಪೈಪ್, ವಿದ್ಯುತ್ & ಇತರೆ ಪೈಪ್‌ಗಳನ್ನು ಹಾನಿಯಾದ್ದಲ್ಲಿ ತಮ್ಮನೇ ನೇರ ಹೊಣೆಗಾರಾಗಿ ಮಾಡಿ ದಂಡ ವಿಧಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಗುತ್ತಿಗೆದಾರರಿಗೆ ಎಚ್ಚರಿಸಿದರು.

- **ಬೊಮ್ಮನಹಳ್ಳಿ ಪೋಲಿಸ್ ಠಾಣೆ**

1. ವಾರ್ಡ್ ವ್ಯಾಪ್ತಿಯ ಓಣಿ ರಸ್ತೆ (ರಾಜಕಾಲುವೆಯಿಂದ ಆಕ್ಸ್‌ಫರ್ಡ್ ಕಾಲೇಜು) ರಸ್ತೆಗಳಲ್ಲಿ ಬಾಡಿಗೆದಾರರು ಮತ್ತು ವಾಹನ ಚಾಲಕರು ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ಸಂಚಾರ ದಟ್ಟಣೆ ಹೆಚ್ಚುತ್ತಿದ್ದು, ಇವುಗಳನ್ನು ನಿಲ್ಲಿಸಂದತೆ ಕ್ರಮವಹಿಸಬೇಕೆಂದು ಶ್ರೀ ಹರೀಶ್, ಮುನಿರಾಜು ಮತ್ತು ಇತರೆ ಸದಸ್ಯರು ರವರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ನವೀನ್, ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರವರು ಈ ಬಗ್ಗೆ ಪರಿಶೀಲಿಸಲಾಗುವುದು ಅಂತಹ ಪ್ರಕರಣದ ಕಂಡು ಬಂದಲ್ಲಿ ಹುಡುಗರಿಗೆ ಎಚ್ಚರಿಕೆ ನೀಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಈ ಹಿಂದೆ ವಾರ್ಡ್ ಸಂಖ್ಯೆ: 190ರ ಮಂಗಮ್ಮನಪಾಳ್ಯ ಮುಖ್ಯ ರಸ್ತೆಯಲ್ಲಿ ಸಂಡೇಬಜಾರ್ ನಡೆಸುತ್ತಿದ್ದು, ಅದೇ ರೀತಿ ಈಗ ಬೇಗೂರು ಮುಖ್ಯ ರಸ್ತೆಯಲ್ಲಿ ಸಂಡೇ ಬಜಾರ್ ನಡೆಸುತ್ತಿದ್ದು, ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಮಳಿಗೆಗಳನ್ನು ನಡೆಸುತ್ತಿರುವುದರಿಂದ ಪಾದಚಾರಿಗಳಿಗೆ ವಾಹನ ಸಂಚಾರಕ್ಕೆ ತುಂಬ ಅಡಚಣೆಯಾಗಿರುತ್ತದೆ ಎಂದು ಸದಸ್ಯರಾದ ಶ್ರೀ ನಾಗಭೂಷಣ್, ಮುನಿರಾಜು, ಹರೀಶ್ ಮತ್ತು ಇತರೆ ಸದಸ್ಯರು ಕೂಡಲೇ ಸಂಡೇ ಬಜಾರ ನಡೆಸದಂತೆ ಎಚ್ಚರಿಕೆ ವಹಿಸಬೇಕೆಂದು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ನೋಡಲ್ ಅಧಿಕಾರಿಗಳು 2-3ದಿನಗಳ ಕಾಲ ಪೋಲಿಸ್ ಇಲಾಖೆ ವತಿಯಿಂದ ಮಳಿಗೆಗಳನ್ನು ಹಾಕದಂತೆ ಪ್ರಚಾರ ಕಾರ್ಯಗಳನ್ನು ಕೈಗೊಂಡು ನಂತರ ಬಿಬಿಎಂಪಿ ಆರೋಗ್ಯ ಪರಿವೀಕ್ಷಕರ ಸಹಕಾರದೊಂದಿಗೆ ಮಳಿಗೆಗಳನ್ನು ತೆರವುಗೊಳಿಸಲು ಕ್ರಮ ವಹಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ ನವೀನ್ ಪಿ.ಎಸ್.ಐ ಬೊಮ್ಮನಹಳ್ಳಿ ರವರಿಗೆ ಸೂಚಿಸಿದರು.

- **ವಿದ್ಯುತ್ ಬೀದಿ ದೀಪ.**

1. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳನ್ನು ಇಂದಿನ ಸಭೆಯಲ್ಲಿ ಚರ್ಚಿಸಲಾಗಿ, ಹೊಂಗಸಂದ್ರ ಊರು ಹಬ್ಬದ ದಿನಾಂಕ: 05.05.2022 ರಿಂದ 07.05.2022ರವರೆಗೆ ಆಚರಣೆ ಮಾಡಲಾಗುವುದು ಆದ್ದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬೀದಿ ದೀಪ ಗಳನ್ನು ದುರಸ್ಥಿ/ಹೊಸದಾಗಿ ಅಳವಡಿಸುವಂತೆ ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ವಿದ್ಯುತ್ ಬೀದಿದೀಪ ರವರಿಗೆ ನೋಡಲ್ ಅಧಿಕಾರಿಗಳು ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಸಹಾಯಕ ಅಭಿಯಂತರರು ವಿದ್ಯುತ್ ರವರು ಸ್ಥಳಗಳನ್ನು ಪರಿಶೀಲಿಸಿ ದುರಸ್ಥಿ ಕಾರ್ಯ ಕೈಗೊಳ್ಳಲಾಗುವುದು ಹೊಸದಾಗಿ ಬೀದಿ ದೀಪ ಅಳವಡಿಸಲು ಸುಮಾರು 1 ತಿಂಗಳ ಕಾಲಾವಕಾಶ ಕೋರಿದರು.

(3.....)

Scanned with

- **ಬೃಹತ್ ನೀರುಗಾಲುವೆ ವಿಭಾಗ**

1. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳನ್ನು ಚರ್ಚಿಸಲಾಗಿದ್ದು, ಹಿಂದಿನ ಸಭೆಗೆ ಗೈರುಹಾಜರಾಗಿರುವ ಸಹಾಯಕ ಅಭಿಯಂತರರಿಗೆ ರವರಿಗೆ ದೂರವಾಣಿ ಮುಖಾಂತರ ಸಭೆಯಲ್ಲಿ ಸದಸ್ಯರುಗಳು ಸಭೆಯ ಗಮನಕ್ಕೆ ತಂದಿರುವ ದೂರುಗಳನ್ನು ಬಗ್ಗೆ ಹರಿಸಲು ಸೂಚಿಸಿದ್ದರು. ಅದರಂತೆ ಸಹಾಯಕ ಅಭಿಯಂತರರು. ಇಂದಿನ ಸಭೆಗೂ ಗೈರುಹಾಜರಾಗಿದ್ದರು. ನೋಡಲ್ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿ ಹಿಂದಿನ ಸಭೆಗಳಲ್ಲಿ ಸಲ್ಲಿಸಿರುವ ದೂರಗಳನ್ನು ಬಗ್ಗೆ ಹರಿಸಲಾಗಿದೆಯೇ ಎಂದು ಪ್ರಶ್ನಿಸಿದ್ದರು. ಸ.ಅ. ರವರು ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳನ್ನು ಎತ್ತಿ . ಛಾಯಾ ಚಿತ್ರಗಳನ್ನು ವಾಟ್ಸ್‌ಆಫ್ ಮೂಲಕ ರವಾನಿಸಲಾಗಿದೆ ಎಂದು ತಿಳಿಸಿರುತ್ತಾರೆ.
2. ಸ್ಮಶಾನ ರಸ್ತೆಯಿಂದ ಓಣಿ ರಸ್ತೆ ವರೆಗೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಕಾರ್ಯದೇಶ ನೀಡಲಾಗಿದ್ದು. ಅದರಂತೆ ಚರಂಡಿ ಕಾಮಗಾರಿ ಪೂರ್ಣಗೊಂಡಿದ್ದು. ಉಳಿಕೆ (ಓಣಿ ರಸ್ತೆಯಿಂದ ಇಚ್ಚಿನಾ ಅಪಾರ್ಟಮೆಂಟ್) ವರೆಗಿನ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದಿಲ್ಲ ಸದಸ್ಯರು ಸಭೆಯ ಗಮನಕ್ಕೆ ತಂದರು ಈ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಸ.ಅ. ರವರ ಉಳಿಕೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಿದ್ದರು. ಈ ಬಗ್ಗೆ ಸ.ಅ. ರವರ ಕೆಲವು ಕಡೆ ಒತ್ತುವರಿಯಾಗಿದ್ದು. ಒತ್ತುವರಿ ಭಾಗಗವನ್ನು ತೆರವುಗೊಳಿಸಬೇಕಾಗಿರುತ್ತದೆ (ಕಾಮಗಾರಿ ಸ್ಥಳ ತಕರಾರು)ನಲ್ಲಿದೆ ಹಾಗೂ ಸರ್ವೆಯಿಂದ ಸರ್ವೆ ಕಾರ್ಯ ನಡೆಸಿ ಸ್ಥಗಿತಗೊಂಡಿರುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಮೇಲಾಧಿಕಾರಿಗಳ ಆದೇಶದಂತೆ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.
3. ಹೊಸೂರು ಮುಖ್ಯ ರಸ್ತೆಯಿಂದ ಮೈಕೋ ಬಡಾವಣೆ ವರೆಗೆ ರಾಜುಕಾಲುವೆಯಲ್ಲಿ ಹೂಳೇತ್ತಲು ಶ್ರೀ ಹರೀಶ್. ಮುನಿರಾಜು. ನಾಗಭೂಷಣ ಸದಸ್ಯರು ಸಭೆಯ ಗಮನಕ್ಕೆ ತಂದು ಈ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರಿಗೆ ಸೂಚಿಸಲಾಗುವುದೆಂದು ತಿಳಿಸಿರುತ್ತಾರೆ.

- **ಬೆಸ್ಕಾಂ**

1. ವಾರ್ಡ್ ವ್ಯಾಪ್ತಿಯ 2ನೇ ಅಡ್ಡ ರಸ್ತೆ. ವಿವೇಕಾನಂದ ನಗರದಲ್ಲಿ ಬೆಸ್ಕಾಂ ಕಂಬಗಳನ್ನು ಅವೈಜ್ಞಾನಿಕವಾಗಿ ಅಳವಡಿಸಿದ್ದು. ಅದರ ಕೆಲವು ವಾಲಿಕೊಂಡಿರುವುತ್ತವೆ ಆದ್ದರಿಂದ ಕೂಡಲೇ ಸರಿಪಡಿಸಬೇಕೆಂದು ಹಾಗೂ ಈಗಾಗಲೇ ಬೆಂಗಳೂರು ನಗರಾದ್ಯಂತ ಬೆಸ್ಕಾಂ ಟ್ರಾನ್ಸ್‌ಪಾರ್ಮರ್. ಕಂಬಗಳಂದ ಅನಾಹುತಗಳು ಸಂಭವಿಸಿದ್ದು. ಅದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಇಂತಹ ಪ್ರಕರಣಗಳನ್ನು ಮರುಕಳಿಸದಂತೆ ಶ್ರೀ ಕೋದಂಡರಾಮ ರೆಡ್ಡಿ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು. ಮಹೇಶ್ ಎಂಬ ಸಹಾಯಕ ಅಭಿಯಂತರರ ಕಾರ್ಯವ್ಯಾಪ್ತಿಗೆ ಸದರಿ ಪ್ರದೇಶವು ಒಳಪಡುತ್ತದೆ ಸದರಿಯವರ ಗಮನಕ್ಕೆ ತಂದು ತುರ್ತಾಗಿ ಕ್ರಮ ಕೈಗೊಳ್ಳಲುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿರುತ್ತಾರೆ.

- **ಕಾಮಗಾರಿ ಇಲಾಖೆ**

1. ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಇಂದಿನ ಸಭೆಯಲ್ಲಿ ಚರ್ಚಿಸಲಾಗಿ ಈ ಬಗ್ಗೆ ಕಾರ್ಯದರ್ಶಿ/ ವಾರ್ಡ್‌ನ ಸಹಾಯಕ ಅಭಿಯಂತರರು. ರವರು ಅಂಬೇಡ್ಕರ್ ಸಮುದಾಯದ ಹಿಂಭಾಗ. Culvert, Retaining and Connecting drain ಕಾಮಗಾರಿ ಕೈಗೊಳ್ಳುವ ಕಾಮಗಾರಿಗೆ ಕಾರ್ಯದೇಶ ನೀಡಲಾಗಿದೆ. ಆದಷ್ಟು ಬೇಗ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
2. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಸರ್ಕಾರಿ ಶಾಲೆ ಅಭಿವೃದ್ಧಿ ಪಡಿಸಲು ಹೆಚ್ಚುವರಿ ಅನುದಾನ ಬಿಡುಗಡೆಯಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರ ಕಛೇರಿಗೆ ಕಡತವನ್ನು ಸಲ್ಲಿಸಲಾಗಿದೆ ಎಂದು ಕಾರ್ಯದರ್ಶಿ/ಸಹಾಯಕ ಅಭಿಯಂತರರು ಸಭೆಯ ಗಮನಕ್ಕೆ ತಂದರು.
3. ಮಳೆಗಾಲ/ಆಕಾಲಿಕ ಮಳೆಯಾಗುತ್ತಿರುವ ಹಿನ್ನಲೇಯಲ್ಲಿ Vulnerable Point (Low area)ಗಳನ್ನು ಗುರುತಿಸಿ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ವಹಿಸಲು ಸೂಚಿಸಲಾಯಿತು.



Scanned with

- **ಆರೋಗ್ಯ ಇಲಾಖೆ:**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೋವಿಡ್-19ರ ಪ್ರಯುಕ್ತ ವೈದ್ಯರನ್ನು ನೇಮಿಸಿದ್ದರು. ಕೋವಿಡ್-19 ಇಳಿಕೆಯಾಗಿರುವುದರಿಂದ ವೈದ್ಯರನ್ನು ತಮ್ಮ ಮಾತೃ ಇಲಾಖೆ ಹಿಂದಿರುಗಿಸಿರುತ್ತಾರೆ. ಆದ್ದರಿಂದ ಖಾಯಂ ವೈದ್ಯರು ಇಲ್ಲದೆ ಇರುವುದರಿಂದ ಸ್ಥಳೀಯರಿಗೆ ಮತ್ತು ಸಾರ್ವಜನಿಕರಿಗೆ ಅನಾನೂಕೂಲವಾಗುತ್ತಿದ್ದು, ಆದ್ದರಿಂದ ಖಾಯಂ ವೈದ್ಯರು, ನರ್ಸ್, Lab Technician ಕೊರತೆ ಇದ್ದು, ಇವರನ್ನು ನೇಮಿಸಿಕೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮಾನ್ಯ ನೋಡಲ್ ಅಧಿಕಾರಿಗಳಲ್ಲಿ ಕೋರಿದ್ದು, ಅದರಂತೆ ಮಾನ್ಯ ನೋಡಲ್ ಅಧಿಕಾರಿ ಆರೋಗ್ಯ ವೈದ್ಯಾಧಿಕಾರಿಗಳು ಬೊಮ್ಮನಹಳ್ಳ ವಲಯ ರವರಿಗೆ ದೂರವಾಣಿ ಮೂಲಕ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿದ್ದು, ವೈದ್ಯಾಧಿಕಾರಿಗಳು ಇಂದು ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ ರವರು ಕೋವಿಡ್-19 ನಾಲ್ಕನೇ ಅಲೆಯ ಬಗ್ಗೆ ಹಾಗೂ ಇತರೆ ವಿಷಯಗಳನ್ನು ಕುರಿತು ಸಭೆಯ ಕರೆದಿದ್ದಾರೆ ಸಭೆಯಲ್ಲಿ ಚರ್ಚಿಸಿದ ನಂತರ ತಮಗೆ ಮಾಹಿತಿ ನೀಡಲಾಗುವುದೆಂದು ಮಾನ್ಯ ನೋಡಲ್ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪ್ರಕರಣಗಳು ಇಲ್ಲಿಯವರೆಗೆ ಯಾವುದು ಕಂಡುಬಂದಿರುವುದಿಲ್ಲ. ಪ್ರತಿ ದಿನ 50 ಕೋವಿಡ್-19 ಪರೀಕ್ಷೆ ನಡೆಸಲಾಗುತ್ತಿದದೆ. 15-16ನೇ ವರ್ಷದವರೆಗೆ ವ್ಯಾಕ್ಸಿನ್ ನೀಡಲಾಗುತಿದ್ದು. ಬೂಸ್ಟರ್ ನೀಡಲು ಆದೇಶವಿರುವುದಿಲ್ಲ. ಖಾಸಗಿ ಆಸ್ಪತ್ರೆಯಲ್ಲಿ ದೊರೆಯುತ್ತದೆ ಎಂದ ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ಕೋವಿಡ್-19ರ ವಿಷಯದ ಬಗ್ಗೆ ಸಭೆಯ ಗಮನಕ್ಕೆ ತಂದರು.

- **ಕೆರೆ ವಿಭಾಗ**

1. ಮಳೆಗಾಲದಲ್ಲಿ/ಆಕಾಲಿಕ ಮಳೆಯಾದಲ್ಲಿ ಬೇಗೂರು ಕೆರೆ, ಚಿಕ್ಕಬೇಗೂರು, ಸಿಂಗಸಂದ್ರ ಕೆರೆಯಿಂದ ಹೆಚ್ಚುವರಿ ನೀರು ಹರಿಯುತ್ತಿದ್ದು, ಇದರಿಂದ ಹೊಂಗಸಂದ್ರ ವ್ಯಾಪ್ತಿಯ, ಮೈಕೋ ಬಡಾವಣೆ, ವಿದ್ಯಾಜ್ಯೋತಿ, ಶಾಂತಿನಗರ, ಮುನಿಯಪ್ಪ ಬಡಾವಣೆ, ಮುನಿಸುಬ್ಬರೆಡ್ಡಿ ಬಡಾವಣೆ ಮತ್ತು ಇತರೆ ಪ್ರದೇಶಗಳಲ್ಲಿ ಜಲಾವೃತಗೊಂಡು ಸಂಚಾರಕ್ಕೆ ಅಡಚಣೆಯಾತ್ತಿದೆ. ಆದ್ದರಿಂದ ಬೇಗೂರು ಕೆರೆ ಹತ್ತಿರ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲು ಸೂಚಿಸುವಂತೆ ಮಾನ್ಯ ನೋಡಲ್ ಅಧಿಕಾರಿಗಳಿಗೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರು ಕೋರಿದ್ದರು. ಈ ಬಗ್ಗೆ ಮಾನ್ಯ ನೋಡಲ್ ಅಧಿಕಾರಿ ಮುಂದಿನ ಸಭೆಗೆ ಕೆರೆಯ ವಿಭಾಗದ ಅಧಿಕಾರಿಗಳು ಆಹ್ವಾನಿಸುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದ್ದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿಗಳ ಉಪಸ್ಥಿಯಲ್ಲಿ ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರು ರವರು ವಾರ್ಡ್ ಸಮಿತಿ ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with